# ಅಕ್ಷಿಪುರುಷ ವಿದ್ಯೆ

ಉಪನಿಷತ್ತುಗಳಲ್ಲಿ ಛಾಂದೋಗ್ಯೋಪನಿಷತ್ತು ಒಂದು. ಇಲ್ಲಿ ಅಕ್ಷಿ ಪುರುಷವಿದ್ಯೆಯ ಮಹತ್ವವನ್ನು ಹೇಳಲಾಗಿದೆ. ಹಾರಿದ್ರುಮತ ಒಬ್ಬ ಮಹಾನ್ ಋಷಿ. ಈತನ ಶಿಷ್ಯನೇ ಸತ್ಯಕಾಮ. ಈತ ಷೋಡಶಕಲ ವಿದ್ಯೆಯನ್ನು ಪಡೆದು ಗುರುವಿನಂತೆ ಪ್ರಖ್ಯಾತಿ ಪಡೆದಿದ್ದ. ಈತನ ಬಳಿ ವಿದ್ಯೆಯನ್ನು ಆರ್ಜಿಸಲು ಅನೇಕ ಶಿಷ್ಯರು ಬರುತ್ತಿದ್ದರು. ಅಂಥವರಲ್ಲಿ ಉಪಕೋಸಲನೂ ಒಬ್ಬ. ಶ್ರದ್ಧೆ ಮತ್ತು ತಪಸ್ಸು ಇರುವವರಿಗೆ ಮಾತ್ರ ಸತ್ಯಕಾಮ ಬ್ರಹ್ಮವಿದ್ಯೆಯನ್ನು ಉಪದೇಶಿಸುತ್ತಿದ್ದ. ಗುರುವಿನ ಬಳಿಗೆ ಬಂದ ಶಿಷ್ಯರು ಹನ್ನೆರಡು ವರ್ಷಗಳ ಕಾಲ ಅಧ್ಯಯನದಲ್ಲಿ ನಿರತರಾಗಿ ಜ್ಞಾನಾರ್ಜನೆಯನ್ನು ಪಡೆಯಬೇಕಾಗಿತ್ತು. ಬ್ರಹ್ಮವಿದ್ಯೆಯನ್ನು ಯಾರು ಬಯಸುತ್ತಾರೋ ಅವರಿಗೆ ಸಂಯಮ ಪ್ರಮುಖವಾಗಿ ಬೇಕಾಗಿರುತ್ತಿತ್ತು. ಉಪಕೋಸಲನು ಕಮಲಾಯನನ ಮಗ. ಈತನಿಗೆ 'ಕಾಮಲಾಯನ' ಎಂಬ ಇನ್ನೊಂದು ಹೆಸರಿತ್ತು. ಉಪಕೋಸಲ ಹನ್ನೆರಡು ವರ್ಷಗಳಿಂದ ಗುರುಸೇವೆಯಲ್ಲಿಯೇ ತೊಡಗಿದ್ದ. ಬ್ರಹ್ಮಚಾರಿಗಳೆಲ್ಲರೂ ಗಾರ್ಹಪತ್ಯ, ಆಹವನೀಯ ಮತ್ತು ಅನ್ವಾಹಾರ್ಯಪಚನ ಎಂಬ ಆ ಮೂರು ಅಗ್ನಿಗಳನ್ನು ಸದಾ ಉಪಾಸನೆ ಮಾಡುತ್ತಿದ್ದರು. ಸತ್ಯಕಾಮರಲ್ಲಿದ್ದ ಅನೇಕ ಬ್ರಹ್ಮಚಾರಿಗಳು ಗುರುವಿನ ಉಪದೇಶವನ್ನು ಪಡೆದು ತಮ್ಮತಮ್ಮ ಮನೆಗೆ ಮರಳುತ್ತಿದ್ದರು. ಆದರೆ, ಉಪಕೋಸಲನಿಗೆ ಮಾತ್ರ ಆ ಭಾಗ್ಯ ಸಿಕ್ಕಿರಲಿಲ್ಲ. ಉಪಕೋಸಲನು ಸತ್ಯಕಾಮರ ಉಪದೇಶಕ್ಕಾಗಿ ಹಾತೊರೆಯುತ್ತಿದ್ದ. ಆದರೆ, ಗುರು ಸತ್ಯಕಾಮ ಉಪಕೋಸಲನಿಗೆ ಉಪದೇಶವನ್ನು ನೀಡಿರಲಿಲ್ಲ. ಉಪಕೋಸಲ ದುಃಖಿತನಾದನೇ ಹೊರತು; ಗುರುವಿನ ಮೇಲೆ ಎಂದೂ ಕೋಪಗೊಳ್ಳಲಿಲ್ಲ. ಸತ್ಯಕಾಮರ ಪತ್ನಿಯು ಆಶ್ರಮದಲ್ಲಿದ್ದ ಪ್ರತಿಯೊಬ್ಬ ಬ್ರಹ್ಮಚಾರಿಗಳಿಗೂ ತಾಯಿಯ ಸ್ಥಾನದಲ್ಲಿ ಇರುತಿದ್ದಳು. ಒಮ್ಮೆ ಆಕೆ ಉಪಕೋಸಲನ ಪರವಾಗಿ ವಿದ್ಯೆಯನ್ನು ಉಪದೇಶಿಸುವಂತೆ ಪತಿಗೆ ಹೇಳಿದಳು. ಉಪಕೋಸಲ, ತ್ರಯಾಗ್ನಿಗಳಲ್ಲಿ ಅತ್ಯಂತ ಶ್ರದ್ಧೆ ಇಟ್ಟಿದ್ದರಿಂದ ಅಗ್ನಿದೇವತೆಗಳು ಕೋಪಗೊಳ್ಳಬಹುದೆಂದು ಹೇಳಿದಳು. ಆದರೆ, ಸತ್ಯಕಾಮ ಉಪಕೋಸಲನಿಗೆ ಉಪದೇಶಿಸುವ ಇಚ್ಛೆಯನ್ನು ಮಾತ್ರ ತೋರಿಸಲಿಲ್ಲ. ಅವರು ಪತ್ನಿಯ ಮಾತನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ದೇಶಾಂತರಕ್ಕೆ ಹೊರಟುಹೋದರು. ಆಗ ಉಪಕೋಸಲನಿಗೆ ದುಃಖವೇ ಉಮ್ಮಳಿಸಿತು. ಅವನು ಊಟ ಮಾಡುವುದನ್ನು ನಿಲ್ಲಿಸಿದ. ಉಪಕೋಸಲನ ಪರಿಸ್ಥಿತಿಯನ್ನು ಅಗ್ನಿದೇವತೆಗಳು ಮನವರಿಕೆ ಮಾಡಿಕೊಂಡರು. ಉಪಕೋಸಲ ನಮ್ಮ ಸೇವೆಯನ್ನು ಬಹಳ ಶ್ರದ್ಧೆಯಿಂದ ಮಾಡಿದ್ದಾನೆ. ತಪೋನಿಷ್ಠನಾದ ಇವನಿಗೆ ಬ್ರಹ್ಮವಿದ್ಯೆ ಉಪದೇಶಿಸಬೇಕೆಂದು ನಿಶ್ಚಯಮಾಡಿಕೊಂಡರು. ಆಗ ಅವನಿಗೆ ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮೇತಿ' ಎಂದು ಉಪದೇಶ ಮಾಡಿದರು. ಆಗ ಉಪಕೋಸಲ ಅಗ್ನಿದೇವತೆಗಳಿಗೆ ಕೈಮುಗಿದು 'ಪ್ರಾಣ ಬ್ರಹ್ಮ ಎಂಬುದನ್ನು ನಾನು ಕೇಳಿ ತಿಳಿದಿದ್ದೇನೆ. ಆದರೆ, ಕಂ ಮತ್ತು ಖಂಗಳ ನಡುವೆ ಯಾವ ಭೇದ ಇದೆಯೆಂಬುದನ್ನು ನಾನು ತಿಳಿದಿಲ್ಲ' ಎಂದು ಅಗ್ನಿದೇವತೆಗಳ ಮುಂದೆ ಸಂಶಯ ವ್ಯಕ್ತಪಡಿಸಿದ. ಆಗ ಅಗ್ನಿದೇವತೆಗಳು ಅವೆರಡರಲ್ಲಿ ಭೇದವಿಲ್ಲವೆಂಬುದನ್ನು ತಿಳಿಸಿಕೊಟ್ಟರು. ಎಂದರೆ ಸುಖ, ಖ ಎಂದರೆ ಆಕಾಶ. ಸುಖ ಕೆಲವೇ ಕ್ಷಣಗಳಲ್ಲಿ ನಾಶವಾಗುತ್ತದೆ. ಆದರೆ, ಆಕಾಶ ಅಚೇತನವಾಗಿರುವುದರಿಂದ ಅದಕ್ಕೆ ನಾಶವಿಲ್ಲ. ಇವೆರಡು ಪದಗಳು ಒಂದಕ್ಕೊಂದು ವಿಶೇಷಣವಾಗಿ 'ಬ್ರಹ್ಮಾನಂದ' ಎಂಬ ಒಂದೇ ಅರ್ಥವನ್ನು ಕೊಡುತ್ತವೆ. ಆಕಾಶದಂತೆ ಬ್ರಹ್ಮ ಕೂಡ ಇಡಿ ವಿಶ್ವವನ್ನೇ ವ್ಯಾಪಿಸಿದ. ಬ್ರಹ್ಮಾನಂದ ಎಂಬುದು ಬಾಹ್ಯವಸ್ತುಗಳಿಂದ ಬರುವುದಿಲ್ಲ. ಈ ಎಲ್ಲ ವಿಷಯಗಳನ್ನು ಉಪಕೋಸಲನಿಗೆ ಅಗ್ನಿದೇವತೆಗಳು ಉಪದೇಶಿಸಿದರು. ಅನಂತರ ಇದರ ಉಪಾಸನಾ ವಿಧಾನಗಳನ್ನು ಆಚಾರ್ಯನ ಮೂಲಕ ತಿಳಿದುಕೋ ಎಂದು ಹೇಳಿದರು. ಸತ್ಯಕಾಮರು ಆಶ್ರಮಕ್ಕೆ ಬಂದಾಗ ಉಪಕೋಸಲನ ಮುಖ ಬ್ರಹ್ಮಜ್ಞಾನಿಯ ಮುಖದಂತೆ ಶೋಭಿಸುತ್ತಿತ್ತು. ಅವರಿಗೆ ಎಲ್ಲಾ ವಿಷಯವೂ ತಿಳಿಯಿತು. ಆಗ ಅವರು 'ಉಪಕೋಸಲ, ಅಗ್ನಿದೇವತೆಗಳು ನಿನಗೆ ಪೃಥಿವ್ಯಾದಿ ಲೋಕಗಳಲ್ಲಿರುವ ಭಗವತ್ ಸ್ವರೂಪಗಳನ್ನು ತಿಳಿಸಿದ್ದಾರೆ. ಆದರೆ, ನಾನು ನಿನಗೆ ಬ್ರಹ್ಮವನ್ನು ಉಪದೇಶಿಸುತ್ತೇನೆ. ಕಮಲದ ಎಲೆಗೆ ನೀರು ಹೇಗೆ ಅಂಟಿಕೊಳ್ಳುವುದಿಲ್ಲವೊ ಹಾಗೆ ಬ್ರಹ್ಮಜ್ಞಾನಿಗೆ ಪಾಪಕರ್ಮಗಳು ಅಂಟಿಕೊಳ್ಳುವುದಿಲ್ಲ. ಯಾವ ಜ್ಞಾನದಿಂದ ಮುಕ್ತಿ ಪಡೆಯಬಹುದೋ ಅಂತಹ ಜ್ಞಾನವನ್ನು ನಾನು ಉಪದೇಶಿಸುತ್ತೇನೆ' ಎಂದು ಬ್ರಹ್ಮಜ್ಞಾನದ ಮಹಿಮೆಯನ್ನು ತಿಳಿಸಿದರು. ಸತ್ಯಕಾಮರು ಉಪದೇಶಿಸಿದ ವಿದ್ಯೆಯೇ 'ಅಕ್ಷಿಪುರುಷವಿದ್ಯೆ' ಎಂದು ಪ್ರಸಿದ್ಧಿ ಪಡೆಯಿತು. ಕಣ್ಣಿನಲ್ಲಿ ಕಾಣುವ ಪುರುಷನೇ ಆತ್ಮ. ಈ ಕಣ್ಣಿನೊಳಗಿರುವ ಪುರುಷ ನಿತ್ಯನೇ ಸರಿ. ಆತನಿಗೆ ಭಯವಿಲ್ಲ. ಆತ ಗುಣಪರಿಪೂರ್ಣ ಮತ್ತು ಅಸಂಗ. ತಾವರೆ ಎಲೆಯ ಮೇಲೆ ಬಿದ್ದ ನೀರು ಅಂಟಿಕೊಳ್ಳದೆ ಹರಿದುಹೋಗುವಂತೆ ಅಕ್ಷಿಪುರುಷನ ಸ್ಥಾನವಾದ ಕಣ್ಣಿನಲ್ಲಿ, ಯಾವ ಪದಾರ್ಥವೂ ಅಂಟಿಕೊಳ್ಳುವುದಿಲ್ಲ. ಈ ಅಕ್ಷಿಪುರುಷನನ್ನು ತಿಳಿದವನಿಗೆ ಎಲ್ಲಾ ಶುಭವಸ್ತುಗಳು ಸಿಗುತ್ತವೆ" ಎಂದು ರಹಸ್ಯವಾಗಿ ಬೋಧಿಸಿದರು. ಇದು ಅಮೃತ ಮತ್ತು ಅಭಯ. ಅಷ್ಟು ಮಾತ್ರವಲ್ಲ ದೃಷ್ಟಿಗೆ ದೃಷ್ಟವೂ ಕಣ್ಣಿಗೆ ಕಣ್ಣೂ ಆಗಿದೆ. ಮನುಷ್ಯನ ಇಂದ್ರಿಯಗಳಲ್ಲಿ ಇದು ಪ್ರಮುಖವಾದ ಅಂಗ. ಇದು ವಿಶೇಷವಾದ ರಕ್ಷಣೆಯನ್ನು ಹೊಂದಿದೆ. ಈ ಕಣ್ಣು ಕರ್ತೃಕರ್ಮಗಳಿಗೆ ತಕ್ಕಫಲವನ್ನು ಉಂಟುಮಾಡುವುದರಿಂದ 'ವಾಮನಿ' ಎನಿಸಿಕೊಂಡಿದೆ. ಎಲ್ಲಾ ಲೋಕಗಳನ್ನು ತೇಜೋಮಯಗೊಳಿಸುವುದರಿಂದ 'ಭಾಮಿನಿ' ಎಂದು ಪ್ರಸಿದ್ಧಿಯನ್ನು ಪಡೆದಿದೆ. ಯಾರು ಇದನ್ನು ತಿಳಿದು ಉಪಾಸನೆ ಮಾಡುತ್ತಾರೋ ಅವರು ಎಲ್ಲಾ ಬಂಧನಗಳಿಂದ ಬಿಡುಗಡೆ ಪಡೆಯುತ್ತಾರೆ! ಉಳಿದ ಯಾವ ಶಿಷ್ಯರಿಗೂ ದಕ್ಕದ 'ಅಕ್ಷಿಪುರುಷವಿದ್ಯೆ'ಯನ್ನು ಉಪಕೋಸಲ ಪಡೆದು ಧನ್ಯನಾದ!

■ ಪುರಂಜೀವಿ

## ಮಾತೇ ಮುತ್ತು

- ಪ್ರೀತಿ ಎಲ್ಲ ವಿಧವಾದ 'ರೋಗ'ಗಳನ್ನೂ ಪರಿಹರಿಸುವ 'ಮದ್ದು'. ಆದರೆ ಅದು ನಿಸ್ವಾರ್ಥ ಮತ್ತು ನಿಷ್ಕಲ್ಮಶವಾಗಿ ಇರದಿದ್ದರೆ ಅರ್ಥಹೀನ.

—ಮಹಾತ್ಮ ಗಾಂಧೀಜಿ

- ಅನುಭವದ ಸಾವೇ ಸೃಜನಶೀಲತೆ.

—ಜಿಡ್ಡು ಕೃಷ್ಣಮೂರ್ತಿ

- ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ಎಂದೂ ದೊಡ್ಡದಾಗದು.

—ಶಿವರಾಮ ಕಾರಂತ

- ಚಾರಿತ್ರ್ಯ ಎಂಬುದು ಮರವಿದ್ದಂತೆ ಹಾಗೂ ಪ್ರಖ್ಯಾತಿ ಎಂಬುದು ನೆರಳಿದ್ದಂತೆ, ಮರವಷ್ಟೇ ವಾಸ್ತವ ಹೊರತು ನೆರಳಲ್ಲ.

—ಅಬ್ರಹಾಂ ಲಿಂಕನ್

- ಸುಳ್ಳು ಹೇಳಿದ ಮೇಲೆ ಮತ್ತೆ ಮತ್ತೆ ಅದನ್ನೇ ಹೇಳುತ್ತಾ ಹೋಗಬೇಕು. ಮನಸ್ಸಿಗಾಗುವ ಈ ಹಿಂಸೆಯೇ ಅದಕ್ಕೆ ತಕ್ಕ ಶಿಕ್ಷೆ.

—ಕೀಟ್ಸ್

- ಕೀರ್ತಿಯನ್ನು ಜೀರ್ಣಿಸಿಕೊಳ್ಳುವುದು ಬಹಳ ಕಷ್ಟ.

—ಕುವೆಂಪು

- ನಮ್ಮ ದುಃಖಗಳಿಗೆ ನಮ್ಮ ಹೀನ ಸ್ಥಿತಿಗೆ ನಾವೇ ಹೊಣೆಗಾರರು.

—ಸ್ವಾಮಿ ವಿವೇಕಾನಂದ

- ಉಪಕಾರವ ಮರೆವುದು ಲೇಸಲ್ಲ, ಅಪಕಾರವ ಅಂದೇ ಮರೆವುದು ಲೇಸು.

—ತಿರುವಳ್ಳುವರ್